# <u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ</u>

**<u>ಸಿಸಿ ಸಂಖ್ಯೆಃ 47/2020</u>**

| | |
|---|---|
| **<u>ಪಿರ್ಯಾದಿದಾರರುಃ</u>** | ಸತ್ಯಕುಮಾರ್ ಎಂ.ಆರ್. ಬಿನ್ ರಾಜಣ್ಣ,<br>ಸುಮಾರು 46 ವರ್ಷ ವಯಸ್ಸು,<br>ವಾಸಃ ಕಾಮನಘಟ್ಟ ಗ್ರಾಮ, ಹಿರಿಸಾವೆ ಹೋಬಳಿ,<br>ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ. |
| | **ವಿರುದ್ಧ** |
| **<u>ಆರೋಪಿ/ತರುಃ</u>** | ಪುಟ್ಟರಾಜು ಬಿನ್ ರಾಜೇಗೌಡ,<br>ಸುಮಾರು 46 ವರ್ಷ ವಯಸ್ಸು,<br>ವಾಸಃ ಕೆರೆಕೋಡಿಹಳ್ಳಿ ಗ್ರಾಮ,<br>ದಂಡಿಗನಹಳ್ಳಿ ಹೋಬಳಿ,<br>ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ.<br>ಹಾಲಿ ವಿಳಾಸಃ ಮೊನಿಕಾ ಐಸ್ ಕ್ರೀಂ,<br>ಎಪಿಎಂಸಿ ಯಾರ್ಡ್,ಹೇಮಾವತಿ ಆಫೀಸ್ ಎದುರು,<br>ಚನ್ನರಾಯಪಟ್ಟಣ ಟೌನ್ ಮತ್ತು ತಾಲ್ಲೂಕು,<br>ಹಾಸನ ಜಿಲ್ಲೆ. |

## <u>ಆಪಾದನೆ</u>

ಶ್ರೀ ದೀಪು ಬಿ.ಸಿ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚನ್ನರಾಯಪಟ್ಟಣ ಆದ ನಾನು ಆರೋಪಿಯಾದ ನಿಮ್ಮ ವಿರುದ್ಧ ಕೆಳಕಂಡ ಆರೋಪಣೆ ಹೊರಿಸುವುದೇನೆಂದರೆ,

ಈ ಪ್ರಕರಣದ ಪಿರ್ಯಾದಿಯು ನೀಡಿದ ದೂರಿನ ಆಧಾರದ ಮೇಲಿಂದ, ಆರೋಪಿಯಾದ ನೀವು ಪಿರ್ಯಾದಿರವರಿಗೆ ಪರಿಚಯದವರಿದ್ದು, ಆರೋಪಿಯಾದ ನೀವು

ನಿಮ್ಮ ಕೈ ಸಾಲ ತೀರುವಳಿ ಮಾಡುವ ಸಲುವಾಗಿ ಮತ್ತು ನಿಮ್ಮ ಗೃಹಕೃತ್ಯದ ಖರ್ಚಿನ ಸಲುವಾಗಿ ಪಿರ್ಯಾದಿಯವರಿಂದ ಸಾಲವಾಗಿ ರೂ.1,60,000.00 ಹಣವನ್ನು ದಿನಾಂಕಃ 28.08.2019 ರಂದು ಪಡೆದಿದ್ದು, ಅದನ್ನು ಮರುಪಾವತಿ ಮಾಡುವ ಸಲುವಾಗಿ ಆರೋಪಿಯಾದ ನೀವು ಫೆಡರಲ್ ಬ್ಯಾಂಕ್ ಲಿ. ಚನ್ನರಾಯಪಟ್ಟಣ ಶಾಖೆಗೆ ಸೇರಿದ ಚೆಕ್ ನಂಃ 112620 ಅನ್ನು ರೂ.1,60,000.00 ಮೊತ್ತಕ್ಕೆ ದಿನಾಂಕ 26.11.2019 ಕ್ಕೆ ಪಿರ್ಯಾದಿಗೆ ಕೊಟ್ಟಿದ್ದು, ಸದರಿ ಚೆಕ್‌ನ್ನು ಪಿರ್ಯಾದಿದಾರರು ನಗಧೀಕರಣಕ್ಕಾಗಿ ತನ್ನ ಖಾತೆ ಇರುವ ಕೆನರಾ ಬ್ಯಾಂಕ್, ಚನ್ನರಾಯಪಟ್ಟಣ ಶಾಖೆಗೆ ದಿನಾಂಕ 26.11.2019 ರಂದು ಸಲ್ಲಿಸಿದಾಗ **"Funds Insufficient"** ಎಂಬ ಹಿಂಬರಹದೊಂದಿಗೆ ದಿನಾಂಕ 27.11.2019 ರಂದು ವಾಪಸ್ಸಾಗಿರುತ್ತದೆ. ಆ ಬಗ್ಗೆ ಪಿರ್ಯಾದುದಾರರು ನಿಮಗೆ ದಿನಾಂಕ 10.12.2019 ರಂದು ನೋಟೀಸ್ ನೀಡಿದ್ದು, ಸದರಿ ನೋಟೀಸ್ ನಿಮಗೆ ದಿನಾಂಕ 23.12.2019 ರಂದು ಖುದ್ದು ಜಾರಿಯಾಗಿರುತ್ತದೆ, ಆದರೂ ಚೆಕ್‌ನ ಮೊತ್ತವನ್ನು ಪಾವತಿಸಿರುವುದಿಲ್ಲ, ಕಾರಣ ನೀವು ಉದ್ದೇಶಪೂರ್ವಕವಾಗಿ ಪಿರ್ಯಾದಿದಾರರ ಹಣವನ್ನು ಕೊಡದೆ ಚೆಕ್‌ನ್ನು ನೀಡಿದ್ದರಿಂದ ಸದರಿ ಚೆಕ್ ಬ್ಯಾಂಕ್‌ನಿಂದ ನಗಧೀಕರಣಗೊಳ್ಳದೇ ಅಮಾನ್ಯಗೊಂಡಿರುತ್ತದೆ. ಆದ್ದರಿಂದ ನೀವು **ಲಿಖಿತಗಳ ವರ್ಗಾವಣೆ ಅಧಿನಿಯಮ ಕಾಯ್ದೆ ಕಲಂಃ 138** ರ ಅಡಿಯಲ್ಲಿ ಅಪರಾಧ ಮಾಡಿರುವಿರಿ ಎಂದು ನಿಮ್ಮ ಮೇಲೆ ಆಪಾದನೆ ಇರುತ್ತದೆ.

1. ಮೇಲೆ ಓದಿ ಹೇಳಿದ ಆರೋಪವು ನಿಮಗೆ ಅರ್ಥವಾಯಿತೆ ?

**ಉತ್ತರ** ಃ ಅರ್ಥವಾಯಿತು

2. ನೀವು ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ಪ್ರತಿರಕ್ಷಣೆ ಇದೆಯಾ ?

**ಉತ್ತರ** ಃ ಪ್ರತಿರಕ್ಷಣೆ ಇದೆ

(ಸದರಿ ಆರೋಪವನ್ನು ಆರೋಪಿಗೆ ಓದಿ, ಹೇಳಿ, ಕೇಳಿ ಆರೋಪಿಯು ಕೊಟ್ಟ ಉತ್ತರವನ್ನು ಅವರ ಹೇಳಿಕೆಯಂತೆ ಬರೆದುಕೊಳ್ಳಲಾಯಿತು ಎಂದು ದೃಢೀಕರಿಸಲಾಗಿದೆ).

ದಿನಾಂಕಃ **24.11.2022**

(ದೀಪು ಬಿ.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.